ವಿಷಯ : ರಾಜ್ಯದಲ್ಲಿ ಹಾಲಿನ ಉತ್ಪಾದನೆಯ ಪ್ರಮಾಣ.

214

ಶ್ರೀ ಗುರುಪಾದಪ್ಪ ನಾಗ್ಮಾರ್‌ಪಲ್ಲಿ (ಔರಾದ್) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಪ್ರತಿದಿನ ಎಷ್ಟು ಲಕ್ಷ ಲೀಟರ್ ಹಾಲಿನ ಉತ್ಪಾದನೆಯಾಗುತ್ತಿದೆ?
ಆ) ರಾಜ್ಯದಲ್ಲಿ ಪ್ರತಿದಿನ ಅಗತ್ಯವಿರುವ ಹಾಲಿನ ಪ್ರಮಾಣವೆಷ್ಟು?
ಇ) ಉಳಿಯುವ ಹಾಲನ್ನು ಯಾವ ರೀತಿಯಲ್ಲಿ ಬಳಸಿಕೊಳ್ಳಲಾಗುತ್ತಿದೆ ?
ಈ) ಗ್ರಾಮಾಂತರ ಪ್ರದೇಶಗಳಲ್ಲಿ ಹಾಲು ಉತ್ಪಾದಕರ ಸಹಕಾರಿ ಸಂಘಗಳು ಹಾಲು ಸರಬರಾಜು ಮಾಡತ್ತಿರುವ ರೈತರಿಗೆ ಸರಿಯಾದ ಸಮಯಕ್ಕೆ ಹಣ ಪಾವತಿ ಮಾಡುತ್ತಿಲ್ಲ ಹಾಗೂ ವಾರದಲ್ಲಿ 2 ದಿನ ಹಾಲನ್ನು ತೆಗೆದುಕೊಳ್ಳುವುದಿಲ್ಲ ವೆಂದು(ಅಧಿಕ ಹಾಲಿನ ಉತ್ಪಾದನೆಯಾಗುತ್ತಿರುವುದರಿಂದ) ಹೇಳುತ್ತಿದ್ದು ಈ ಬಗ್ಗೆ ಸರ್ಕಾರ ಯಾವ ಕ್ರಮವನ್ನು ಕೈಗೊಳ್ಳುತ್ತದೆ?

ಶ್ರೀ ಕೆ.ಎನ್. ನಾಗೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) ಅಂದಾಜು 65.15 ಲಕ್ಷ ಲೀಟರ್
ಆ) ಅಂದಾಜು 65.70 ಲಕ್ಷ ಲೀಟರ್
ಇ) ಪ್ರಸ್ತುತ ಶೇಖರಣೆಯಾಗುತ್ತಿರುವ 11.27 ಲಕ್ಷ ಲೀಟರ್‌ನಲ್ಲಿ 9.50 ಲಕ್ಷ ಲೀಟರ್ ಹಾಲನ್ನು ಗ್ರಾಹಕರಿಗೆ ಮಾರಾಟ ಮಾಡಲಾಗುತ್ತಿದೆ. ಉಳಿದ 1.77 ಲಕ್ಷ ಲೀಟರ ಹಾಲನ್ನು ಹಾಲಿನ ಉತ್ಪನ್ನಗಳನ್ನಾಗಿ ಪರಿವರ್ತಿಸಲಾಗುತ್ತಿದೆ .
ಈ) ಈ ವರ್ಷದ ಹಾಲಿನ ಸುಗ್ಗಿಯಲ್ಲಿ ಹೆಚ್ಚಿನ ಹಾಲು ಶೇಖರಣೆಯಾಗಿರುವುದರಿಂದ ಉತ್ಪಾದಕರಿಗೆ ಹಣ ಪಾವತಿ ಮಾಡುವಲ್ಲಿ ಸ್ವಲ್ಪಮಟ್ಟಿಗೆ ವಿಳಂಬವಾಗಿದೆ. ಇದನ್ನು ನಿವಾರಿಸಲು ಆಯಾ ಹಾಲು ಒಕ್ಕೂಟಗಳಿಗೆ ದುಡಿಯುವ ಬಂಡವಾಳ ನೀಡಲಾಗಿದೆ. ಹಾಗೂ ಎಲ್ಲಾ ದಿನಗಳಲ್ಲಿಯೂ ಹಾಲನ್ನು ತೆಗೆದುಕೊಳ್ಳಲಾಗುತ್ತಿದೆ.

ವಿಷಯ : ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಶಾಲಾ ವಿದ್ಯಾರ್ಥಿಗಳು ಪಠ್ಯ ಪುಸ್ತಕಗಳಲ್ಲದೇ ಅನುಭವಿಸುತ್ತಿರುವ ತೊಂದರೆ.

213

ಶ್ರೀ ಗುರುಪಾದಪ್ಪ ನಾಗ್ಮಾರ್‌ಪಲ್ಲಿ (ಔರಾದ್) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಪ್ರಾಥಮಿಕ ಹಾಗೂ ಪ್ರೌಢ ಶಾಲಾ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳು ಸರಿಯಾಗಿ ಸಿಕ್ಕದೇ ಇರುವುದರಿಂದ ತೀವ್ರವಾದ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?
ಆ) ಹಾಗಿದ್ದಲ್ಲಿ ಮುಂದಿನ ಶೈಕ್ಷಣಿಕ ವರ್ಷ ಪ್ರಾರಂಭವಾಗುವ ಸಮಯಕ್ಕಾದರೂ